

ವೈಜಯಂತಿ ಕಾಶಿ

ಮಧುರಾತಿಮಧುರ ಸಂಗೀತ ಕಛೇರಿಗಳನ್ನು ನಿರಂತರವಾಗಿ ಆಸ್ವಾದಿಸಬಹುದು. ಸಂಗೀತದ ಕ್ಲಾಸ್‌ಗಳು ತಪ್ಪಿಹೋಯಿತಲ್ಲ ಎಂದು ವಿದ್ಯಾರ್ಥಿಗಳು ಪರಿತಪಿಸಬೇಕಿಲ್ಲ. ಆನ್‌ಲೈನ್ ಮೂಲಕವೇ ಗುರುವಿನ ಬಳಿ ಕಲಿತುಕೊಳ್ಳಬಹುದು. ಇದು ಆನ್‌ಲೈನ್ ಸಂಗೀತದ ಕಾಲ.

ಬೆಂಗಳೂರಿನಲ್ಲಿ ಕುಳಿತು ದೂರದ ಲಂಡನ್‌ನಲ್ಲೋ ಅಮೆರಿಕದಲ್ಲೋ ಇರುವ ಶಿಷ್ಯನಿಗೆ ಪಾಠ ಹೇಳುವುದು, ಇಂಗ್ಲೆಂಡ್‌ನ ಸಂಗೀತ ಸಂಸ್ಥೆ ಆಯೋಜಿಸುವ ಕಛೇರಿಯನ್ನು ಇಲ್ಲೇ ಕುಳಿತು ನಡೆಸಿಕೊಡುವುದು ಈಗ ಸುಲಭಸಾಧ್ಯ. ಅಷ್ಟೇ ಏಕೆ, ಹಳ್ಳಿಯಲ್ಲಿ ಕುಳಿತು ನಗರದಲ್ಲಿರುವ ಗುರುವಿನೊಂದಿಗೆ ಸಂವಾದ ನಡೆಸಬಹುದು, ಸಂಶಯ ಪರಿಹರಿಸಿಕೊಳ್ಳಬಹುದು.

ಸಾಂಸ್ಕೃತಿಕ ಕಾರ್ಯಕ್ರಮ, ಸಂಗೀತೋತ್ಸವ, ರೆಕಾರ್ಡಿಂಗ್ , ಸಂಗೀತ–ನೃತ್ಯ ಶಿಬಿರ, ಪ್ರಾತ್ಯಕ್ಷಿಕೆ ಮುಂತಾದ ಎಲ್ಲ ಚಟುವಟಿಕೆಗಳು ರದ್ದಾದ ಹಿನ್ನೆಲೆಯಲ್ಲಿ ಕಲಾವಿದರಿಗೆ ತೆರೆದುಕೊಂಡಿರುವ ಹೊಸ ಬೆಳಕಿಂಡಿ ಆನ್‌ಲೈನ್! ಅಂತರ್ಜಾಲದ ಮೂಲಕ ಗುರು–ಶಿಷ್ಯರು ಒಬ್ಬರ ಮುಖ ಇನ್ನೊಬ್ಬರು ನೋಡಿಕೊಂಡು ತಾಳಕ್ಕೆ ತಕ್ಕಂತೆ ರಾಗಗಳ ಸಂಚಾರ, ಸ್ವರ ಪ್ರಸ್ತಾರ ಎಲ್ಲವನ್ನೂ ನಡೆಸಬಹುದು. ಫೇಸ್‌ಬುಕ್ ಲೈವ್ ಕಛೇರಿ, ವಾಚ್‌ಪಾರ್ಟಿಗಳು, ವಿಡಿಯೊ ಕಾಲ್ ಕಾನ್ಫರೆನ್ಸ್ – ಎಲ್ಲವೂ ಈಗ ಆನ್‌ಲೈನ್! ತಂತ್ರಜ್ಞಾನದಲ್ಲಿ ಅಷ್ಟೇನೂ ಆಸಕ್ತಿಯಿಲ್ಲದ ಕಲಾವಿದರು ಕೂಡ ಸಂಕಷ್ಟದ ದಿನಗಳಲ್ಲಿ ಆನ್‌ಲೈನ್ ವೇದಿಕೆಗೆ ಒಗ್ಗಿಕೊಳ್ಳುತ್ತಿದ್ದಾರೆ. ಕಿರುತೆರೆ ಕಲಾವಿದರ ವಾಚ್‌ಪಾರ್ಟಿಯೂ ಇಂಟರ್ನೆಟ್ ಮೂಲಕ ನಡೆಯುತ್ತಿದ್ದು, ದಿನ ಬೆಳಗಾಗುತ್ತಿದ್ದಂತೆ ನೂರಾರು ‘ಫ್ಯಾನ್ಸ್ ಕ್ಲಬ್’ಗಳು ತಲೆಯೆತ್ತುತ್ತಿವೆ.

ಸಂಗೀತ ಸಂಯೋಜಕ ಪ್ರವೀಣ್ ಡಿ. ರಾವ್ ನೇತೃತ್ವದಲ್ಲಿ ಉಸ್ತಾದ್ ಫಯಾಜ್‌ಖಾನ್,

> ಸಂಗೀತ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಅರಿವಿನ ಕೌಶಲ, ಏಕಾಗ್ರತೆ, ಸಾಮಾಜಿಕ ಹಾಗೂ ಸೃಜನಾತ್ಮಕ ಕೌಶಲ ಬೆಳೆಸಿಕೊಳ್ಳಲು ಸಹಕರಿಸುತ್ತದೆ. ಆನ್‌ಲೈನ್ ಮೂಲಕ ಸಂಗೀತ ಕಲಿಯಬಹುದು, ಆದರೆ ನುರಿತ ಕಲಾವಿದರು ಪ್ರಾಮಾಣಿಕವಾಗಿ ಕಲಿಸಿದಾಗ ಮಾತ್ರ ಆ ಉದ್ದೇಶ ಸಾರ್ಥಕತೆ ಪಡೆಯುತ್ತದೆ.
>
> **-ಸೌಮ್ಯಾರಾಣಿ,** ಆನ್‌ಲೈನ್‌ನಲ್ಲಿ ಸಂಗೀತ ಕಲಿಯುವ ವಿದ್ಯಾರ್ಥಿನಿ